225

ಚಿಕ್ಕಬಳ್ಳಾಪುರ ಸಬ್ ಡಿವಿಜ್ಞ ಆಫಿಸರವರಿಂದ.

ತಾರೀಖು 29ನೇ ಮಾಹೆ ಫಿಬ್ರವರಿ ಸ್ಯ 1896ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚಿಕ್ಕಬಳ್ಳಾಪುರ ತಾಲ್ಲೂಕು ಪೂರ್ಣಸಾಗರ ಹೋಬಳಿ ಯರ್ರಮಾರೇನಹಳ್ಳಿ ಮಜರೆ ನಾರೇನಹಳ್ಳಿ ಯಂಬ ಜೇ

1ನೇ ಸಾಲಿಗೆ	ಕಂದಾಯ	15—12—0	ಚಿರಾಖ್ ಗ್ರಾಮದಲ್ಲಿ ಬಂಜರಿನಲ್ಲಿ ಇರುವ
2ನೇ ಡಿಟೋ	ಡಿಟೋ	31— 8—0	ಇನಾಂ. ಶಿವಾಯಿ ಎಕ್ ಸರ್ಕಾರಿ ಬಾಬತು
3ನೇ ಡಿಟೋ	ಡಿಟೋ	47— 4—0	ಒಟ್ಟಿಗೆ ಆಕಾರ 155—12—0 ರೂ
4ನೇ ಡಿಟೋ	ಡಿಟೋ	63— 0—0	ಪಾಯಿವುಳ್ಳ ಸಾಗುವಳಿ ಲಾಯಖ್ ವಿಶಿಷ್ಟ
5ನೇ ಡಿಟೋ	ಡಿಟೋ	78—12—0	ಜಮೀರ್ಗಳನ್ನೂ ಬಾಜಾದಲ್ಲಿ ಕೊಣಿಕಿ ಇರುವ
6ನೇ ಡಿಟೋ	ಡಿಟೋ	94— 8—0	ಅಳವೆ. ಕಂದಾಯದ ಮೇಲೆ ಸಾಗುವಳಿಗೆ
7ನೇ ಡಿಟೋ	ಡಿಟೋ	110— 4—0	ಕೊಡಿಸಬೇಕೆಂತಲೂ ಸದರೀ ಜಮೀನಿಗೆ ಆ
8ನೇ ಡಿಟೋ	ಡಿಟೋ	126— 0—0	ಧಾರವಾಗಿರುವ ಕಿಕಸ್ತು ಕಲ್ಲುಭೂವಿ ಮೂರು
9ನೇ ಡಿಟೋ	ಡಿಟೋ	141—12—0	ಕುಂಟೆ ವಂದು ಸಹ ದುರಸ್ತು ಮಾಡಿಕೊಂಡು
10ನೇ ಡಿಟೋ	ಡಿಟೋ	155—12—0	ತರೀ ಬಾಗಾಯತು ಜಮೀರ್ಗಳಿಗೆ ನೀರುಕ

ಟ್ಟಿಕೊಳ್ಳುತ್ತಾ ಖುಷ್ಕೀ ಜಮೀನಿಗೆ ನೀರು ಕಟ್ಟಿಕೊಂಡರೆ ನೀರು ಸರದಿ ಕೊಡುವದಲ್ಲದೆ, ಭೂವಿ, ಕುಂಟೆ ಹಕ್ಕು ಸರಕಾರಕ್ಕೆ ವುಳಸಿಕೊಳ್ಳಬಹುದೆಂತಲೂ ಇದು ಬೇಚಿರಾಖ್ ಗ್ರಾಮ ಆಬಾದಿಗೆ ತರಬೇಕಾದ್ದರಿಂದ ಈ ನಂಬರ್ಗಳಲ್ಲಿ ಇರತಕ್ಕ ವೂಲ್ಕಿ ಸ್ವತ್ತು ಪೈಕಿ ಹತ್ತು ಮನೆಗಳಿಗೆ ತಕ್ಕಷ್ಟು ಮುಫತ್ತು ಬಿಟ್ಟು ಬಾಕಿ ವೂಲ್ತಿ ಸ್ವತ್ತಿಗೆ ಕಿಮ್ಮತ್ತು ಕಟ್ಟಿಸಿ ಕೊಡಬೇಕೆಂತಲೂ ಆದನ್ನ ವಡನೇ ಕೊಡುವದಾಗಿಯೂ ಸದರೀ ಹತ್ತು ಸಾಲ್ ಅಳವೆ ಕಾಲದಲ್ಲಿ ದರ ಸಾಲ್ 10ನೇ ವಂದು ಭಾಗದ ವೇರಿಗೆ ಅಳವೆ ಆಖೈರ್ ವಾಯಿದೆ ವಳಗೆ ಪೂರಾ ಜಮೀರ್ಕಿದ್ದಿಗೆ ತಂದು ಸಾಗುವಳಿ ಮಾಡುವದಾಗಿಯೂ ತಪ್ಪಿದರೆ ಸದರೀ ಜಮೀರ್ಗಳಿಗೆ ಪುರೂ ಸಾಲ್ ಲಾಗಾಯತು ಸರಕಾರಕ್ಕೆ ಭರ ಆಕಾರ ಕೊಡುವದಾಗಿಯೂ ಈ ಷರತ್ತುಗಳ ಮೇಲೆ ಸಾಗುವಳಿಗೆ ಕೊಡಿಸಬೇಕೆಂದು ಗೋರೀಬಿದನೂರು ತಾಲ್ಲೂಕು ಅರಸಾಲ್ ಬಂಡೆ ವೊರಪ್ಪ ಮಾವಿನಕಾಯಿನಹಳ್ಳಿ ನರಸಿಂಗಪ್ಪನ ಮಗ ಕೇಸಪ್ಪ ನೆಂಬುವನು ದರಖಾಸ್ತು ಕೊಟ್ಟು ಇರುತ್ತಾನೆ, ಆದ್ದರಿಂದ ದರಖಾಸ್ತು ಮಾಡಲ್ಪಟ್ಟ ಜಮೀರ್ಗಳನ್ನು ಭರ ಆಕಾರದ ಮೇಲಾಗಲಿ ಅಥವಾ ವೇಲ್ಕಂಡ ದರಖಾಸ್ತು ನಮೂದಿಸುವ ಅಳವೆ ಕಾಲ ಮತ್ತು ಷರತ್ತುಗಳಿಗಿಂತಲೂ ಕಮ್ಮಿ ಆದ ಕಾಲ ವ ಷರತ್ತುಗಳ ಮೇಲಾಗಲಿ ಅಥವಾ ಸರಕಾರಕ್ಕೆ ಲಾಭಕರವಾದ ಇತರ ಷರತ್ತು ವೈಗೈರೆ ಮೇಲಾಗಲಿ ದರಖಾಸ್ತು ಮಾಡಲಬೇಕ್ಷೆ ವುಳ್ಳವರು ಈ ತಾರೀಖು ಲಾಗಾಯತು 3 ತಿಂಗಳ ವಳಗೆ ದರಖಾಸ್ತು ಕೊಡುಬಹುದು. ಆ ಪ್ರಕಾರ ದರಖಾಸ್ತುಗಳು ಬಾರದೆ ಇದ್ದಲ್ಲಿ ಲ್ಯಾಂಡ್ ರೆವಿನ್ಯೂ ರೂಲ್ಸ್ 20ನೇ ಕಲಂ 18ನೇ ಪ್ಯಾರಾ ಪ್ರಕಾರ ಯುಕ್ತಕಂಡ ರೀತಿ ವೆವಸ್ಥೆ ಮಾಡಲಾಗೀತು.

ಬಿ. ಜಿ. ಕೃಷ್ಣಯ್ಯಂಗಾರ್,
ಸಬ್ ಡಿವಿಜ್ಞ ಆಫಿಸರ್.

ಫಾರೆಸ್ಟ್ ಇಲಾಖಾ.

ತುಮಕೂರು ಡಿಸ್ಟ್ರಿಕ್ಟ್.

ತಾರೀಖು 16ನೇ ಮಾರ್ಚಿ 1896ನೇ ಇಸವಿ.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ;—ಸರ್ಕಾರಿ ತರ್ಫನಿಂದ, ತುಮಕೂರು ಡಿಸ್ಟ್ರಿಕ್ಟ್ ದೇವರಾಯದುರ್ಗ, ಮದ್ದಗಿರಿ, ಕುದುರೆಕಣವೆ, ಹುಲಿಯೂರದುರ್ಗ, ಬುಕ್ಕಾಪಟ್ಟಣದ ಫಾರೆಸ್ಟ್ಗಳಲ್ಲಿ ಜವಾಯಿಸಲ್ಪಟ್ಟ 1895—96ನೇ ಸಾಲ್ ಪಸಾರೆ ಜಿನಸಿಗಳು ವಗೈರೆ ಈ ಕೆಳಗೆ ನಮೂದಾಗುವ ತಾರೀಖು ಮತ್ತು ಸ್ಥಳಗಳಲ್ಲಿ ಹರಾಜು ಮಾಡಲ್ಪಡುತ್ತೆ.

1896ನೇ ಇಸವಿ ಏಪ್ರೆಲ್ 14ರಲ್ಲು ಹುಲಿಯೂರದುರ್ಗದ ತಾಲ್ಲೂಕು ಕಚೇರಿಯಲ್ಲಿ.

ನಂಬರ್.	ಜಿನಸು ತಪಶೀಲ್.	ಪಲ್ಲ.	ಮಣ.	ಶೇರು.	ಷರಾ.
1	ಅಳಲೇಕಾಯಿ	..	229	..	ಸರಾಸರಿ
2	ಹೊಂಗೇಬೀಜ	1	..	..	ಡಿಟೋ
3	ಸೀಗೇಕಾಯಿ	..	20	..	ಡಿಟೋ
4	ಹುಣಸೇಹಣ್ಣು	..	10	..	ಡಿಟೋ

226

1896ನೇ ಇಸವಿ ಏಪ್ರಿಲ್ 17ರಲ್ಲು ತುಮಕೂರ ಡಿಪೋದಲ್ಲಿ

ನಂಬರ್.	ಜಿನಸು ತಪಶೀಲ್.	ಪಲ್ಲ.	ಮಣ.	ಕೇರು.	ಷರಾ.
1	ಆಳಲೇಕಾಯಿ		100		ಡಿಟೋ
2	ಗೇರುಬೀಜ (Marking nut)	1			ಡಿಟೋ
3	ಹೊಂಗೇಕಾಯಿ	10			ಡಿಟೋ
4	ಸೀಗೇಕಾಯಿ		85		ಡಿಟೋ
5	ಲಾಕ್ (ಕೆರಗು)		2		ಡಿಟೋ
6	ಹುಣಸೇ ಹಂಣು		100		ಡಿಟೋ
7	ಕಫಿಲಾರಂಗು		1	14	ಡಿಟೋ
8	ಕ್ಯಾಸು ಆರೀನತೀರು	ನಂಬರ್ 24	ಸಲಿ 51-3-3		ಡಿಟೋ

1896ನೇ ಇಸವಿ ಏಪ್ರಿಲ್ 20ನ್ನು ಪುದ್ದಗಿರಿ ಡಿಪೋದಲ್ಲಿ.

1	ಆಳಲೇಕಾಯಿ		700		ಡಿಟೋ
2	ಗೇರುಬೀಜ	3			ಡಿಟೋ
3	ಹೊಂಗೇಕಾಯಿ			50	ಡಿಟೋ
4	ಹುಣಸೇಹಂಣು		10		ಡಿಟೋ
5	ತ್ಯೆಗದ ತೀರು	ನಂಬರ್ 124	ಸ|| 118-11-3		ಡಿಟೋ
6	ಹುಲ್ವೇ	1	8		ಡಿಟೋ

1896ನೇ ಇಸವಿ ಏಪ್ರಿಲ್ 22ರಲ್ಲು ಶಿರಾ ಮುಸಾಫರ್ ಬಂಗ್ಲೆದೆಲ್ಲಿ.

1	ಆಳಲೇಕಾಯಿ		770		ಡಿಟೋ
2	ಹುಣಸೇಹಂಣು		6		ಡಿಟೋ
3	ಕುದರೆಕಣವೆ ಸ್ಪೇಟ್ ಫಾರೆಸ್ಟ್ ಬಾಬು ತು ಆಳಲೇಕಾಯಿ		67		ಡಿಟೋ

ಮೊಬಲಗು ಪಾವತಿ ಯಾ ಹರಾಜು ತಾರೀಖು ಲಾಗಾಯತು ಕಾವಲ್ ಈಟ್ಟಣಿ ಹರಾಜುದಾರ್ರಿಗೇನೇ ಸಂಬಂಧಪಡುತ್ತೆ.

ಷರತ್ತು.—ಕೇಕಡಾ 25 ರೂಪಾಯಿನಂತೆ ಡಿಪಾಜಿಟ್ ಮೊಬಲಗು ತಕ್ಷಣ ಕಟ್ಟಬೇಕು. ಬಾಕಿ ಮೊಬಲಗು ಹರಾಜ್ ತಾರೀಖು ಲಾಗಾಯತು ಎಂದು ವಾರದೊಳಗಾಗಿ ಪಾವತಿ ಮಾಡಬೇಕು, ತಪ್ಪಿದರೆ ಬಾಬನ್ನು ಪುನಹ ಹರಾಜ್ ಮಾಡಲ್ಪಡುತ್ತೆ. ಲಾಕನಾನಿಗೆ ಮೊದಲ್ ಹರಾಜುದಾರನ್ನ ಗುರಿಮಾಡುತ್ತೆ. ಸಾಮಾನುಗಳು ಹರಾಜು ತಾರೀಖು ಲಾಗಾಯತು 10 ದಿವಸಗಳ ವಳಗಾಗಿ ಸಾಗಿಸಿಕೊಳ್ಳಲ್ಪಡಬೇಕು. ಇವುಗಳ ಶಿವಾಯಿ ಇತರ ತಪಶೀಲಿಗಳಿಗೆ 1887ನೇ ಇಸವಿ ಸೆಪ್ಟಂಬರ್ 3ನೇ ಮತ್ತು ಂ 35ನೇ ನಂಬರಿ ಗೆಜೆಟ್ಟಿನ 1ನೇ ಭಾಗದಲ್ಲಿ ಘಾಯಿಷಾಗಿರುವ 1887ನೇ ಇಸವಿ ಆಗಸ್ಟ್ 30ನೇ ಮತ್ತು ಂ 90ನೇ ನಂಬರ್ ಪ್ರಕಟನೆ ನೋಡಿ.

ಯಂ.ವೆಂಕಟನಾರಣಪ್ಪ,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.

ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಇಲಾಖೆ.
ನೋಟಿಫಿಕೇರ್ಷ್.

ತಾರೀಖು 14ನೇ ಮಾರ್ಚಿ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಹುಣಸೂರು ಸಂದಲ್ಕೋಠಿಯಲ್ಲಿ 113 ಟರ್ ಬಿಲ್ ಚಕ್ಕೆಯು 1896ನೇ ಇಸವಿ ಏಪ್ರಿಲ್ 20ರಲ್ಲೂ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರು ಅಥವಾ ಅದಕ್ಕಾಗಿ ನೇಮಿಸಲ್ಪಡುವ ಇತರ ಆಫಿಸರ ವರಿಂದ ಹರಾಜು ಮಾಡಿಸಲ್ಪಡುತ್ತೆ.

ಷರತ್ತು.—1895ನೇ ಇಸವಿ ಏಪ್ರಿಲ್ ಮಾಹೆ 15ನೇ ನಂಬರಿ ಮೈಸೂರ್ ಗೆಜೆಟ್ಟನಲ್ಲಿ ಘಾಯಿಷ್ ಮಾಡಲ್ಪಟ್ಟಿರುವ ಮಾರ್ಚಿ ಮಾಹೆ 15ನೇ ಮತ್ತು ಂ 15230 ಆರ್. ಎಫ್. 155—92ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್‌ನಾಮೆಯನ್ನು ನೋಡಿಕೊಳ್ಳಬಹುದು.

ಟ. ಅಬ್ದುಲ್‌ಕರೀಮ್, ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್.

ಹಾಸನ ಡಿಸ್ಟ್ರಿಕ್ಟು.
ಇಸ್ತಿಹಾರ್‌ನಾಮೆ.

ತಾರೀಖು 17ನೇ ಮಾರ್ಚಿ 1896.

ಇದರಿಂದ ಪ್ರಕಟಪಡಿಸುವದೇನಂದರೆ,—ಹಾಸನ ಡಿಸ್ಟ್ರಿಕ್ಟು ಅರಸೀಕೆರೆ ಫಾರೆಸ್ಟ್ ಡಿಪೋದಲ್ಲಿ ಜಮಾಯಿಸಲ್ಪಟ್ಟಿರುವ ಸುಮಾರು (25) ಸೀವಿರ ಮಣುಗಳ ಆಳಲೇಕಾಯಿಯನ್ನು ದರ ಸಾವಿರ ಮಣಿಗಳಿಗೆ ಬಂದೊಂದು ಲಾಟುಗಾ ಮಾಡಿ ಹಾಸನ ಡಿಸ್ಟ್ರಿಕ್ಟು ಫಾರೆಸ್ಟ್ ಅಸಿಸ್ಟೆಂಟ್ ಕ್ವಸರ್‌ವೇಟರವರ ರೂಬರೂ ಬರುವ ಏಪ್ರಿಲ್ ಮಾಹೆ 10ನೇ ತಾರೀಖು ಶುಕ್ರವಾರ ದಿವಿ 11 ಘಂಟೆ ಲಾಗಾಯತು ಹರಾಜು ಮಾಡಿಸುತ್ತಾದ್ದರಿಂದ ಇಚ್ಛೈವುಳ್ಳವರು ಆ ಕಾಲಕ್ಕೆ ಹಾಜರಾಗಿ ಛಡವರಖಾಸ್ತು ಮಾಡಬಹುದಾಗಿರುತ್ತೆ.

ಹರಾಜಿನ ರೂಲ್ಸನ್ನು ಆ ಕಾಲದಲ್ಲಿ ಓದಿ ಹೇಳಲಾಗುತ್ತು ಜರ್ಜ ರೂಲ್ಸ್ ಪ್ರಕಾರವೇ ಮೇಲ್ಕಂಡ ಹರಾಜು ನಡಿಸಲ್ಪಡುವದು.

ಎಸ್. ಎ. ಬಾಪೂರಾವ್, ಫಾರೆಸ್ಟ್ ಅಸಿಸ್ಟೆಂಟ್ ಕ್ವಸರ್‌ವೇಟರ್.

MYSORE GOVERNMENT CENTRAL PRESS, BANGALORE—1896.